**O.S No. 1146/2022**
**PW: 1**

**-14-**

ದಿನಾಂಕ12**-03-2026**ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ1ನೇ** ಪ್ರತಿವಾದಿ ಪರ ವಕೀಲರಾದ ಶ್ರೀ **BDK** ರವರಿಂದಃ

ನಾನು 10 ನೇ ತರಗತಿ ವರೆಗೆ ಓದಿದ್ದೇನೆ. ನಾನು ನೇಕಾರಿಕೆ ಕೆಲಸ ಮಾಡುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಖರೀದಿ ಪತ್ರಕ್ಕೆ ಬಾಳುರವರ ಸಹೋದರಿಯರ ಸಹಿ ಪಡೆದುಕೊಂಡಿಲ್ಲ ಎಂದರೆ ಅವರ ಸಹೋದರಿಯರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡುವಾಗ ಆಸ್ತಿಯ ಬಗ್ಗೆ ಮತ್ತು ಅದರ ಮೇಲಿನ ಹಕ್ಕಿನ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಖರೀದಿ ಮಾಡಬೇಕಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಎಲ್ಲಾ ದಾಖಲೆಗಳನ್ನು ನೋಡಿಯೇ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಖರೀದಿ ಮಾಡುವ ಪೂರ್ವದಲ್ಲಿ ನಾನು ಪತ್ರಿಕಾ ಪ್ರಕಟಣೆ ಪಡೆದುಕೊಂಡಿರಲಿಲ್ಲ. ಖರೀದಿ ಮಾಡುವ ಪೂರ್ವದಲ್ಲಿ 1ನೇ ಪ್ರತಿವಾದಿಗೆ ಎಷ್ಟು ಜನ ಸಹೋದರಿಯರು ಎಂದು ವಿಚಾರಿಸಿದ್ದೆ. ಆಗ 1ನೇ ಪ್ರತಿವಾದಿಗೆ ಯಾರು ಸಹೋದರಿಯರು ಇಲ್ಲ ಎಂದು ಅಕ್ಕ - ಪಕ್ಕದವರು ಹೇಳಿದ್ದರು. ನಾನು ನಿಜವಾಗಿಯೂ ಖರೀದಿ ಮಾಡದ ಕಾರಣ 1ನೇ ಪ್ರತಿವಾದಿಯರ ಸಹೋದರಿಯರ ಸಹಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಈ ವರೆಗೂ 1ನೇ ಪ್ರತಿವಾದಿ ಹಾಗೂ ಅವರ ಕುಟುಂಬದವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಯಪತ್ರವನ್ನು ಸೃಷ್ಟಿ ಮಾಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆಸ ರಿಯಲ್ಲ. 1ನೇ ಪ್ರತಿವಾದಿ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**.**

ಓ ಹೇ ಕೇ ಸ ಇದೆ.

Sd/-

**1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**

**O.S No. 1146/2022**
**PW: 1**